CC 116/2025
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 24.11.2025.

**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯ ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಎಸ್ ಎಸ್ ವಕೀಲರಿಂದಃ</u>**

ಆರೋಪಿ ನನಗೆ ಸುಮಾರು 10-15 ವರ್ಷಗಳಿಂದ ಪರಿಚಯ. ನಾನು ಚನ್ನಗಿರಿಯಲ್ಲಿ ವಾಸವಿರುತ್ತೇನೆ. ಆರೋಪಿಯು ಹಡೋನಹಳ್ಳಿಯಲ್ಲಿ ವಾಸವಿರುತ್ತಾರೆ. ಚನ್ನಗಿರಿಯಿಂದ ಆರೋಪಿಯ ಊರಿಗೆ ಎಷ್ಟು ಅಂತರ ಆಗುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ನನ್ನ ಬಳಿ ಸಾಲವನ್ನು ಪಡೆಯಲು ಬರುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ನಾನು ಚೀಟಿ ವ್ಯವಹಾರ ಮಾಡುವುದಿಲ್ಲ. ಆರೋಪಿಯು ಗಳಗಳ ವ್ಯಾಪಾರ ಮಾಡುತ್ತಾರೆ. ಆರೋಪಿಯನ್ನು ಮಿಲಿಟರಿ ಕರಿಬಸಪ್ಪ ಎಂದು ಕರೆಯುತ್ತಾರೆ. ಆರೋಪಿಯು ಮಿಲಿಟರಿಯಿಂದ ಯಾವಾಗ ನಿವೃತ್ತಿ ಹೊಂದಿದರು ಎಂದು ನನಗೆ ಗೊತ್ತಿಲ್ಲ. ಆರೋಪಿಯ ಜೊತೆ ನನ್ನ ಗಂಡ ವ್ಯವಹಾರ ಮಾಡಿದ್ದರು.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**